ಅಧಿಕ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳವರ ನ್ಯಾಯಾಲಯ, ಗುಬ್ಬಿ.

ಉಪಸ್ಥಿತರು: ಶ್ರೀಮತಿ.ಸವಿತರಾಣಿ ಹೆಚ್.ವಿ.

ಬಿ.ಎ.ಎಲ್, ಎಲ್ಎಲ್.ಬಿ.,

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಗುಬ್ಬಿ.

ದಿನಾಂಕ 13ನೇ ಜುಲೈ 2026

ಅಸಲು ದಾವಾ ಸಂಖ್ಯೆ: 406/2026

ವಾದಿ : **ಶ್ರೀಮತಿ ದಿಲ್ ಶಾದ್ ಉನ್ನೀಸಾ**
ಕೋಂ ಲೇಟ್ ಸಾಬುಲಾಲ್ ಸಾಬ್,
ವಯಸ್ಸು ಸುಮಾರು 75 ವರ್ಷ,
ವಾಸ : ನಂ.125, ಹೆಗಡೆ ಕಾಲೋನಿ,
ತುಮಕೂರು.

(ಪ್ರತಿನಿಧಿಸುವವರು: ಶ್ರೀ ಎಸ್.ಜೆ.ಡಿ. ನ್ಯಾಯವಾದಿಗಳು)

-ವಿರುದ್ದ-

ಪ್ರತಿವಾದಿ : **ಪಂಚಾಯತ್ ಅಭಿವೃದ್ಧಿ ಅಧಿಕಾರಿ,**
ದೊಡ್ಡಕುನ್ನಾಲ ಗ್ರಾಮ ಪಂಚಾಯತಿ,
ಕಡಬ ಹೋಬಳಿ, ಗುಬ್ಬಿ ತಾಲ್ಲೂಕು,
ತುಮಕೂರು ಜಿಲ್ಲೆ.

(ಪ್ರತಿನಿಧಿಸುವವರು: ಶ್ರೀ ಕೆ.ಸಿ.ಎನ್. ನ್ಯಾಯವಾದಿಗಳು)

:: <u>ಮಧ್ಯಂತರ ಅರ್ಜಿ ಸಂಖ್ಯೆಃ 1ರ ಪಕ್ಷಗಾರರು</u> ::

ಅರ್ಜಿದಾರರುಃ ಶ್ರೀಮತಿ ದಿಲ್ ಶಾದ್ ಉನ್ನೀಸಾ

-ವಿರುದ್ದ-

ಎದುರುದಾರರುಃ ಪಂಚಾಯತ್ ಅಭಿವೃದ್ದಿ ಅಧಿಕಾರಿ.

:: <u>ಮಧ್ಯಂತರ ಅರ್ಜಿ ಸಂಖ್ಯೆ - 3ರ ಮೇಲಿನ ಆದೇಶ</u> ::

ಪ್ರಸ್ತುತ ಈ ಮಧ್ಯಂತರ ಅರ್ಜಿ-3 ನ್ನು ವಾದಿಯು ಪ್ರತಿವಾದಿಯ ವಿರುದ್ಧ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ ಕಲಂ 151ರ ರೀತ್ಯಾ ಸಲ್ಲಿಸಿರುತ್ತಾರೆ.

2. ವಾದಿಯು ಶಾಶ್ವತ ನಿರ್ಬಂಧಕಾಜ್ಞೆಯ ಆದೇಶವನ್ನು ಕೋರಿ ಸದರಿ ದಾವೆಯನ್ನು ಪ್ರತಿವಾದಿಯ ವಿರುದ್ಧ ಸಲ್ಲಿಸಿದ್ದು, ವಾದಿಯು ಮಧ್ಯಂತರ ಅರ್ಜಿ-1ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ ಕಲಂ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿದ್ದು, ಈ ದಾವೆಯ ಅಂತಿಮವಾಗಿ ತೀರ್ಮಾನವಾಗುವವರೆಗೂ ಪ್ರತಿವಾದಿಯು ದಾವಾ ಷೆಡ್ಯೂಲ್ ಸ್ವತ್ತಿಗೆ ಕಾನೂನುಬಾಹಿರವಾಗಿ ಹಸ್ತಕ್ಷೇಪ ಮಾಡದಂತೆ ಹಾಗೂ ಭೂಮಿಯಲ್ಲಿ ಕಟ್ಟಡ ಕಟ್ಟಲು ಗುಂಡಿ ತೆಗೆಯದಂತೆ ಅಂದರೆ ವಾದಿಯ ಜಮೀನಿಗೆ ಹೋಗಲು

ಇರುವ ದಾರಿಯನ್ನು ಉಪಯೋಗಿಸಲು ತೊಂದರೆ ನೀಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ನೀಡಬೇಕೆಂದು ಪ್ರಾರ್ಥಿಸಿರುತ್ತಾರೆ.

3. ವಾದಿಯು ತನ್ನ ಪ್ರಮಾಣ ಪತ್ರದಲ್ಲಿ ತಿಳಿಸಿದಂತೆ, ವಾದಿಯು ದಾವಾ ಷಡ್ಯೂಲ್ ಸ್ವತ್ತಿನ ಸಂಪೂರ್ಣ ಮಾಲೀಕರಾಗಿ ಸ್ವಾಧೀನದಲ್ಲಿರುತ್ತಾರೆ. ಸದರಿ ದಾವಾ ಷಡ್ಯೂಲ್ ಸ್ವತ್ತಾದ ಗುಬ್ಬಿ ತಾಲ್ಲೂಕು, ಕಡಬ ಹೋಬಳಿ, ಕುನ್ನಾಳು ಗ್ರಾಮದಲ್ಲಿರುವ ಸರ್ವೆ ಸಂಖ್ಯೆ 177/1 ರಲ್ಲಿ ಒಟ್ಟು 3-00 ಎಕರೆ ವಿಸ್ತೀರ್ಣದ ಪೈಕಿ 0-38.08 ಎಕರೆ ಗುಂಟೆ ಜಮೀನು ವಾದಿಗೆ ಸೇರಿರುತ್ತದೆ. ಸದರಿ ದಾವಾ ಷಡ್ಯೂಲ್ ಸ್ವತ್ತು ವಾದಿಯ ಕುಟುಂಬದ ಸ್ವತ್ತಾಗಿದ್ದು, ಅದನ್ನು ವಾದಿಯ ಗಂಡ ಸಾಬುಲಾಲ್ ಸಾಬ್ ಅವರು ವಿಭಾಗದ ಮೂಲಕ ಪಡೆದುಕೊಂಡಿದ್ದು, ಅವರ ಹೆಸರಿನಲ್ಲಿ ಪಹಣಿ ಮತ್ತು ಎಂ.ಆರ್ ಸಹ ದಾಖಲಾಗಿರುತ್ತದೆ. ವಾದಿಯ ಗಂಡನ ಮರಣದ ನಂತರ ದಿನಾಂಕ:20.03.2022 ರ ಪಹಣಿಯಲ್ಲಿ ತಿದ್ದುಪಡಿಯಾಗಿ ವಾದಿಯ ಹೆಸರಿಗೆ ಪಹಣಿ ಮತ್ತು ಎಂ.ಆರ್ ಸಂ.16/2005-2026 ದಿನಾಂಕ 30.10.2025 ರ ಪ್ರಕಾರ ಖಾತಾ ಸಂಖ್ಯೆ:381 ರಂತೆ ವಾದಿಯ ಹೆಸರಿಗೆ ದಾಖಲಾಗಿರುತ್ತದೆ. ಅಂದಿನಿಂದ ವಾದಿಯು ಸದರಿ ಸ್ವತ್ತಿನ ಶಾಂತಿಯುತ ಸ್ವಾಧೀನದಲ್ಲಿದ್ದು, ಸಂಪೂರ್ಣ

ಮಾಲೀಕಳಾಗಿ ಅನುಭವಿಸುತ್ತಿರುತ್ತಾರೆ. 3-00 ಎಕರೆಯಲ್ಲಿ ವಾದಿಯ ಕುಟುಂಬದ ಸದಸ್ಯರು ಅವರವರ ಪಾಲಿಗೆ ಅನುಗುಣವಾಗಿ ಜಂಟಿ ಸ್ವಾಧೀನದಲ್ಲಿ ಮುಂದುವರೆಸಿಕೊಂಡು ಬರುತ್ತಿದ್ದು, ಅದರಂತೆ ಪಹಣಿಯಲ್ಲಿ ವಾದಿಯ ಹೆಸರಿಗೆ 0-38-00 ಗುಂಟೆಗಳು ಎಂದು ಸ್ಪಷ್ಟವಾಗಿ ನಮೂದಿಸಿಲಾಗಿದೆ ಹಾಗೂ ವಾದಿಯು 2025-26 ರ ವರೆಗೂ ಹಕ್ಕು ಮತ್ತು ಸ್ವಾಧೀನದಲ್ಲಿ ಇರುತ್ತಾರೆ ಎಂಬುದು ಸ್ಪಷ್ಟಪಡಿಸುತ್ತದೆ. ಪ್ರತಿವಾದಿಯು ಗುಬ್ಬಿ ತಾಲ್ಲೂಕು, ಕಡಬಾ ಹೋಬಳಿ, ಕುನ್ನಾಳ ಗ್ರಾಮದ ಸರ್ವೆ ನಂ.177/1 ರ ಜಮೀನಿನಲ್ಲಿ ಯಾವುದೇ ರೀತಿಯ ಹಕ್ಕು ಮತ್ತು ಸ್ವಾಧೀನವನ್ನು ಹೊಂದಿರುವುದಿಲ್ಲ. ಆದರೆ ಪ್ರತಿವಾದಿಯ ಜಮೀನು ಗುಬ್ಬಿ ತಾಲ್ಲೂಕು, ಕಡಬಾ ಹೋಬಳಿ, ಕುನ್ನಾಳ ಗ್ರಾಮದ ಸರ್ವೆ ನಂ.174 ರಲ್ಲಿ ಪೂಟ್ ಖರಾಬ್ ಜಮೀನು 0-19.00 ಗುಂಟೆ ಸೇರಿದಂತೆ ಒಟ್ಟು 2.13.00 ಗುಂಟೆಗಳಿದ್ದು, ಇದರಲ್ಲಿ ಉಳಿದಿರುವ 1.34 ಗುಂಟೆಗಳ ಪೈಕಿ 0.04.08 ಗುಂಟೆ ಜಮೀನು ದಿನಾಂಕ:07-11-2001 ಎಂ.ಆರ್.ನಂ.11/1995-96 ಅಡಿಯಲ್ಲಿ ತಾಲ್ಲೂಕು ಪಂಚಾಯತ್ ನ ಕಾರ್ಯನಿರ್ವಾಹಕ ಅಧಿಕಾರಿಯವರ ಹೆಸರಿನಲ್ಲಿರುತ್ತದೆ. ಸದರಿ ಸರ್ವೆ ನಂಬರ್ ನಲ್ಲಿ ಹಕ್ಕು ಪಡೆಯುವ ಬದಲು ಕುನ್ನಾಳ ಗ್ರಾಮ ಪಂಚಾಯ್ತಿಯ

ಪಿ.ಡಿ.ಓ ರವರು ದಾವಾ ಸ್ವತ್ತಾದ ಸರ್ವೆ ನಂ.177/1 ರಲ್ಲಿವ ವಾದಿಯ ಸ್ವಾಧೀನಿನಲ್ಲಿ ಕಾನೂನುಬಾಹಿರವಾಗಿ ಹಸ್ತಕ್ಷೇಪ ಮಾಡುತ್ತಿರುತ್ತಾರೆ ಮತ್ತು ಇತ್ತೀಚೆಗೆ ಕಟ್ಟಡವನ್ನು ನಿರ್ಮಿಸುವ ಉದ್ದೇಶದಿಂದ ಗುಂಡಿಗಳನ್ನು ತೋಡಲು ಮುಂದಾಗುತ್ತಿದ್ದಾರೆ. ನಂತರ ವಾದಿಯು ಈ ಕಾನೂನುಬಾಹಿರ ಹಸ್ತಕ್ಷೇಪವನ್ನು ತಡೆಯಲು ಮತ್ತು ಕಾನೂನು ಬಾಹಿರ ಕಟ್ಟಡ ನಿರ್ಮಾಣವನ್ನ ನಿಲ್ಲಿಸಲು ದಿನಾಂಕ:05-05-2026 ರಂದು ಗುಬ್ಬಿಯ ಇಒ.ಟಿ.ಪಿ, ಅವರಿಗೆ ಅರ್ಜಿಯನ್ನು ಸಲ್ಲಿಸಿದೆ ಹಾಗೂ ಕಾನೂನು ಬಾಹಿರವಾಗಿ ಮಣ್ಣು ಅಗೆಯುತ್ತಿರುವ ಫೋಟೋ ಕಾಪಿಯನ್ನು ದಾವೆಯೊಂದಿಗೆ ಹಾಜರುಪಡಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಪ್ರತಿವಾದಿಯು ಹಸ್ತಕ್ಷೇಪ ಮಾಡುತ್ತಿರುವ ಶೆಡ್ಯೂಲ್ ಆಸ್ತಿ ಸರ್ವೆ ನಂ.177/1 ರ ಸ್ವತ್ತು ವಾದಿಗೆ ಸೇರಿದ್ದಾಗಿದೆ ಮತ್ತು ಸರ್ವೆ ನಂ.174 ಕುನ್ನಾಳ ಗ್ರಾಮಕದ ಜಮೀನಿಗೆ ಯಾವುದೇ ಸರ್ವೆ ನಂ. ಅಥವಾ ಗಡಿಗಳನ್ನು ನಿಗದಿಪಡಿಸದೆ ತನಗೆ ಸೇರಿದ್ದಾಗಿದೆ ಎಂದು ಪ್ರತಿವಾದಿ ಹೇಳಿಕೊಳ್ಳುತ್ತಿದ್ದಾರೆ. ಕುನ್ನಾಳ ಗ್ರಾಮದ ಸರ್ವೆ ನಂಬರ್ 174 ಕ್ಕೂ ದಾವಾ ಸ್ವತ್ತಿಗೂ ಯಾವುದೇ ಸಂಬಂದವಿರುವುದಿಲ್ಲ. ಪ್ರತಿವಾದಿಯು ದಾವ ಸ್ವತ್ತಿನಲ್ಲಿ ಅಂದರೆ, ವಾದಿಯು ತನ್ನ ಜಮೀನಿಗೆ ಹೋಗಲು ರಸ್ತೆಯಾಗಿ ಬಳಸುತ್ತಿರುವ

ಜಮೀನಿನ ಪ್ರವೇಶದ್ವಾರಕ್ಕೆ ಪ್ರತಿವಾದಿಯು ಕಾನೂನುಬಾಹಿರವಾಗಿ ಅಡ್ಡಿಪಡಿಸುತ್ತಿದ್ದಾರೆ ಮತ್ತು ಹಸ್ತಕ್ಷೇಪ ಮಾಡುತ್ತಿದ್ದಾರೆ. ಒಂದು ವೇಳೆ ಪ್ರತಿವಾದಿಯು ಕಾನೂನುಬಾಹಿರವಾಗಿ ಅಲ್ಲಿ ಕಟ್ಟಡವನ್ನು ನಿರ್ಮಿಸಿದರೆ, ವಾದಿಯು ಖಂಡಿತವಾಗಿಯೂ ಅಪಾರ ನಷ್ಟವನ್ನು ಅನುಭವಿಸಬೇಕಾಗುತ್ತದೆ ಮತ್ತು ತನ್ನ ಜಮೀನಿಗೆ ಪ್ರವೇಶಿಸಲು ಸಾಧ್ಯವಾಗುವುದಿಲ್ಲ. ಆದ್ದರಿದ ನ್ಯಾಯಾಲಯವು ಈ ದಾವೆಯು ಅಂತಿಮವಾಗಿ ಇತ್ಯರ್ಥದವರೆಗೆ ದಾವೆ ಅನುಸೂಚಿ ಆಸ್ತಿಯಲ್ಲಿ ವಾದಿಯ ಶಾಂತಿಯುತ ಸ್ವಾಧೀನ ಮತ್ತು ಅನುಭವಕ್ಕೆ ಪ್ರತಿವಾದಿಯು ಅಡ್ಡಿಪಡಿಸದಂತೆ ಮಧ್ಯಂತರ ತಡೆಯಾಜ್ಞೆ ಆದೇಶವನ್ನು ನೀಡುವುದು ನ್ಯಾಯಯುತ ಮತ್ತು ಅತ್ಯಗತ್ಯವಾಗಿದೆ. ಇದರಿಂದ ಪ್ರತಿವಾದಿಗೆ ಯಾವುದೇ ಹಾನಿಯಾಗುವುದಿಲ್ಲ, ಆದರೆ ಮಧ್ಯಂತರ ತಡೆಯಾಜ್ಞೆ ನೀಡದಿದ್ದರೆ ವಾದಿಗೆ ಸರಿಪಡಿಸಲಾಗದ ನಷ್ಟವನ್ನು ಅನುಭವಿಸಬೇಕಾಗುತ್ತದೆ ಮತ್ತು ಪ್ರತಿವಾದಿಯು ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡಿದರೆ, ವಾದಿಯ ಜಮೀನಿನ ಪ್ರವೇಶ ರಸ್ತೆಯೂ ಸಹ ಸಂಪೂರ್ಣವಾಗಿ ಮುಚ್ಚುತ್ತದೆ. ತದನಂತರ ವಾದಿಯು ತನ್ನ ಜಮೀನಿಗೆ ಪ್ರವೇಶಿಸಲು ಸಾದ್ಯವಾಗುವುದಿಲ್ಲ. ಆದ್ದರಿಂದ ನ್ಯಾಯಾಲಯವು

ಪ್ರತಿವಾದಿಯ ವಿರುದ್ದ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

4. ಪ್ರತಿವಾದಿಗೆ ನ್ಯಾಯಾಲಯದ ಮೂಲಕ ಸಮನ್ಸ್ ಜಾರಿಯಾಗಿದ್ದು, ಪ್ರತಿವಾದಿಯು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ಮಧ್ಯಂತರ ಅರ್ಜಿ-1 ಕ್ಕೆ ತಮ್ಮ ಪರ ತಕರಾರನ್ನು ಸಲ್ಲಿಸಿರುತ್ತಾರೆ.

ಪ್ರತಿವಾದಿಯು ತನ್ನ ತಕರಾರಿನಲ್ಲಿ ವಾದಿಯ ದಾವಾಂಶಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ದಾವೆಯ ಅನುಸೂಚಿ ಆಸ್ತಿಯು ಪ್ರತಿವಾದಿಯ ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯ ಹತ್ತಿರ ಬರುವುದಿಲ್ಲ ಮತ್ತು ವಾದಿಯ ಆಸ್ತಿಯು ಪ್ರತಿವಾದಿಯ ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಗೆ ಹೊಂದಿಕೊಂಡಿರುವುದಿಲ್ಲ. ಗುಬ್ಬಿ ತಾಲ್ಲೂಕು, ಕಡಬಾ ಹೋಬಳಿ, ಕುನ್ನಾಳ ಗ್ರಾಮದ ಸ.ನಂ. 177/1ರಲ್ಲಿ ಒಟ್ಟು 3 ಎಕರೆ ವಿಸ್ತೀರ್ಣದ ಜಮೀನು ಇದ್ದು, ಸದರಿ ಪಹಣಿಯಲ್ಲಿ ಬೇರೆ ಬೇರೆ ಜನರ ಹೆಸರಿನಲ್ಲಿ ಬೇರೆ ಬೇರೆ ಅಳತೆಗಳಲ್ಲಿ ಇರುತ್ತವೆ. ಆದ್ದರಿಂದ ಈ ದಾವೆಯಲ್ಲಿ ಆ ಎಲ್ಲಾ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ, ಆದ್ದರಿಂದ ಈ ದಾವೆಯು

ಊರ್ಜಿತವಾಗಿರುವುದಿಲ್ಲ. ಗುಬ್ಬಿ ತಾಲ್ಲೂಕು, ಕಡಬಾ ಹೋಬಳಿ, ಕುನ್ನಾಳ ಗ್ರಾಮದಲ್ಲಿರುವ ಸ.ನಂ. 174 ರಲ್ಲಿ ಖರಾಬು ಸೇರಿ ಒಟ್ಟು 2 ಎಕರೆ 13 ಗುಂಟೆ ಜಮೀನು ಇದ್ದು, ಸದರಿ ಆಸ್ತಿಯು ಮೂಲತಃ ಸರ್ಕಾರಕ್ಕೆ ಸೇರಿದ್ದು, ಸರ್ಕಾರವು ಸದರಿ ಜಮೀನಿನ ಪೈಕಿ 0.04.08 ಗುಂಟೆಯನ್ನು ಗುಬ್ಬಿಯ ತಾಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿರವರಿಗೆ 1995 ರಲ್ಲಿ ನೀಡಲಾಗಿರುತ್ತದೆ. ಅದರಂತೆ ಎಂ.ಆರ್ ನಂ.11/1995-96 ರಂತೆ ಗುಬ್ಬಿಯ ತಾಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯ ಹೆಸರಿಗೆ ನಮೂದಿಸಲಾಗಿರುತ್ತದೆ ಮತ್ತು ಸದರಿ ಆಸ್ತಿಯ ಎಲ್ಲಾ ಕಂದಾಯ ದಾಖಲೆಗಳನ್ನು ಗುಬ್ಬಿ ತಾಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯ ಹೆಸರಿಗೆ ವರ್ಗಾಯಿಸಲಾಯಿತು. ತದನಂತರ ಕಾರ್ಯನಿರ್ವಾಹಕ ಅಧಿಕಾರಿ ತಾಲೂಕು ಪಂಚಾಯತ್ ಗುಬ್ಬಿರವರು ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯ ಸಂಪೂರ್ಣ ಮಾಲೀಕರಾಗಿ ಶಾಂತಿಯುತ ಸ್ವಾಧೀನ ಹಾಗೂ ಅನುಭವವನ್ನು ಹೊಂದಿರುತ್ತಾರೆ. ಸದರಿ ಆಸ್ತಿಯಲ್ಲಿ ಒಂದು ಅಂಗನವಾಡಿ ಕಟ್ಟಡವಿದ್ದು, ಸದರಿ ಅಂಗನವಾಡಿ ಕಟ್ಟಡದಲ್ಲಿ ಅನೇಕ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಸದರಿ ಅಂಗನವಾಡಿ ಕಟ್ಟಡವು ಹಳೆಯ ಕಟ್ಟಡವಾಗಿದ್ದು, ಅದು ಬಿದ್ದುಹೋಗುವ

ಸ್ಥಿತಿಯಲ್ಲಿರುತ್ತದೆ. ಈ ಕಾರಣಕ್ಕಾಗಿ ಹೊಸ ಅಂಗನವಾಡಿ ಕಟ್ಟಡವನ್ನು ಸರ್ಕಾರದಿಂದ ಅನುಮೋದಿಸಲಾಗಿದೆ. ಈ ನಿಟ್ಟಿನಲ್ಲಿ ದಿನಾಂಕ:20.12.2025 ರಂದು ಕುನ್ನಾಲ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಹೊಸ ಅಂಗನವಾಡಿ ಕಟ್ಟಡದ ನಿರ್ಮಾಣಕ್ಕಾಗಿ KREIS ಯೋಜನೆಗೆ ಅನುಮೋದನೆ ನೀಡಲಾಗಿದ್ದು, ಅದರಂತೆ ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯಲ್ಲಿ ಹೊಸ ಅಂಗನವಾಡಿ ಕಟ್ಟಡದ ನಿರ್ಮಾಣಕ್ಕಾಗಿ ಸರ್ಕಾರದಿಂದ ಶ್ರೀ ರಘುನಾಥ ರಾಮಾ ರೆಡ್ಡಿ ಎಂಬುವವರಿಗೆ ಹೊಸ ಅಂಗನವಾಡಿ ಕಟ್ಟಡ ನಿರ್ಮಾಣದ ಗುತ್ತಿಗೆದಾರರಾಗಿ ಯೋಜನೆ ಮಾಡಿ, ಕಾಮಗಾರಿ ಆದೇಶವನ್ನು ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟು ಹೊರಡಿಸಲಾಗಿರುತ್ತದೆ. ಸದರಿ ಷರತ್ತಿನಂತೆ ಗುತ್ತಿಗೆದಾರರಾದ ಶ್ರೀ ರಘುನಾಥ ರಾಮಾ ರೆಡ್ಡಿ ರವರು ಹೊಸ ಅಂಗನವಾಡಿ ಕಟ್ಟಡವನ್ನು ಕಾಮಗಾರಿ ಆದೇಶ ನೀಡಿದ ದಿನಾಂಕದಿಂದ 12 ತಿಂಗಳೊಳಗೆ ನಿರ್ಮಿಸಬೇಕಾಗಿರುತ್ತದೆ. ಆದರೆ ವಾದಿಯು ಅಂಗನವಾಡಿ ಕಟ್ಟಡದ ನಿರ್ಮಾಣ ಕಾರ್ಯಕ್ಕೆ ಅಡ್ಡಿಪಡಿಸುತ್ತಿದ್ದಾರೆ.

ಪ್ರತಿವಾದಿಯು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದು, ಸದರಿ ಅಂಗನವಾಡಿ ಕಟ್ಟಡವು ಪ್ರತಿವಾದಿಯ ನಿಯಂತ್ರಣಕ್ಕೆ ಬರುವುದಿಲ್ಲ.

ಪ್ರತಿವಾದಿಯು ವಾದಿಯ ಶಾಂತಿಯುತ ಸ್ವಾಧೀನಕ್ಕೆ ಹಸ್ತಕ್ಷೇಪ ಮಾಡುತ್ತಿಲ್ಲ. ಏಕೆಂದರೆ ವಾದಿಯ ಆಸ್ತಿಯ ನಂತರ ಶಾಲಾ ಕಟ್ಟಡವನ್ನು ಹೊಂದಿರುತ್ತದೆ, ಹೀಗಿರುವಾಗ ಪ್ರತಿವಾದಿಯು ವಾದಿಯ ಶಾಂತಿಯುತ ಸ್ವಾಧೀನಕ್ಕೆ ಹೇಗೆ ಹಸ್ತಕ್ಷೇಪ ಮಾಡಲು ಸಾಧ್ಯ ಎಂಬುದಾಗಿರುತ್ತದೆ. ದಾವಾ ಆಸ್ತಿ ಮತ್ತು ಪ್ರತಿವಾದ ಪತ್ರದ ಆಸ್ತಿಗಳು ಒಂದಕ್ಕೊಂದು ವಿಭಿನ್ನ ಆಸ್ತಿಗಳಾಗಿದ್ದು, ವಾದಿಯು ದಾವಾ ಶೆಡ್ಯೂಲ್ ಆಸ್ತಿಯ ಚೆಕ್ಕುಬಂದಿಯನ್ನು ತಪ್ಪಾಗಿ ನೀಡಿರುತ್ತಾರೆ. ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯ ಚೆಕ್ಕುಬಂದಿ, ಪೂರ್ವಕ್ಕೆ:ಗ್ರಾಮ ಠಾಣಾ, ಪಶ್ಚಿಮಕ್ಕೆ:ಸರ್ಕಾರಿರಸ್ತೆ , ಉತ್ತರಕ್ಕೆ:ಹಳೆಯ ಅಂಗನವಾಡಿ ಕಟ್ಟಡ, ದಕ್ಷಿಣಕ್ಕೆ: ಸರ್ಕಾರಿ ಶಾಲೆ, ತದನಂತರ ವಾದಿಯ ಆಸ್ತಿ ಬರುತ್ತದೆ.

ವಾದಿಯು ಗುಬ್ಬಿಯ ಇ.ಓ ರವರಿಂದ ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಪ್ರತಿವಾದಿಯ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿದ್ದಾರೆ. ವಾದಿಗೆ ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯ ಮೇಲೆ ಯಾವುದೇ ಹಕ್ಕು, ಅಧಿಕಾರ ಮತ್ತು ಸ್ವಾಧೀನವಾಗಲಿ ಇರುವುದಿಲ್ಲ. ಸದರಿ ಹೊಸ ಅಂಗನವಾಡಿ ಕಟ್ಟಡವನ್ನು ಕಾಂಟ್ರಾಕ್ಟರ್ ರಘುನಾಥ ರಾಮ ರೆಡ್ಡಿ ರವರು ಸ.ನಂ.177/1 ರಲ್ಲಿ ನಿರ್ಮಿಸುತ್ತಿಲ್ಲ ಮತ್ತು ವಾದಿಯ ದಾವಾ

ಆಸ್ತಿಯ ಶಾಂತಿಯುತ ಸ್ವಾಧೀನಕ್ಕೆ ಯಾವುದೇ ಅಡ್ಡಿಪಡಿಸಿರುವುದಿಲ್ಲ. ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯು ಗುಬ್ಬಿಯ ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯ ಹೆಸರಿನಲ್ಲಿದ್ದು, ಸದರಿ ಜಾಗದಲ್ಲಿ ಅಂಗನವಾಡಿ ಕಟ್ಟಡವನ್ನು ರಘುನಾಥ ರಾಮರೆಡ್ಡಿ ಅವರು ನಿರ್ಮಿಸುತ್ತಿದ್ದು, ಸದರಿಯವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ಆದ್ದರಿಂದ, ಈ ದಾವೆಯು ಕಾನೂನಿನ ಪ್ರಕಾರವಾಗಲಿ ಅಥವಾ ವಾಸ್ತವಿಕ ಸಂಗತಿಗಳ ಆಧಾರದ ಮೇಲಾಗಲಿ ಮುಂದುವರೆಸಲು ಯೋಗ್ಯವಾಗಿರುವುದಿಲ್ಲ. ಆದ್ದರಿಂದ ವಾದಿಯು ತಂದಿರುವ ಮಧ್ಯಂತರ ಅರ್ಜಿಯನ್ನು ವಜಾ ಗೊಳಿಸಬೇಕೆಂದು ಕೋರಿರುತ್ತಾರೆ.

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು. ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

6. ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ನ್ಯಾಯಾಲಯದ ಗಮನಕ್ಕೆ ಈ ಕೆಳಕಂಡ ಅಂಶಗಳು ಪರಿಶೀಲನೆಗೆ ಉದ್ಭವಿಸಿರುತ್ತವೆ.

1. ಮೇಲ್ನೋಟಕ್ಕೆ ಸಮ್ಮತವಾದ ದಾವೆಯನ್ನು ಹೊಂದಿರುತ್ತೇನೆಂಬುದನ್ನು ವಾದಿಯು ರುಜುವಾತು ಪಡಿಸುತ್ತಾರೆಯೇ ?

2. ಅನುಕೂಲತೆಯ ಒಲವು ತನ್ನ ಪರವಾಗಿ ಇರುತ್ತದೆ ಎಂಬುದನ್ನು ವಾದಿಯು ರುಜುವಾತು ಪಡಿಸುತ್ತಾರೆಯೇ ?

3. ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡದೆ ಇದ್ದಲ್ಲಿ, ತನಗೆ ತುಂಬಲಾರದ ನಷ್ಟಂಟಾಗುವ ಸಂಭವವಿರುತ್ತದೆ ಎಂಬುದನ್ನು ವಾದಿಯು ರುಜುವಾತುಪಡಿಸುತ್ತಾರೆಯೇ ?

4. ಯಾವ ಆದೇಶ ?

7. ನ್ಯಾಯಾಲಯದ ಮುಂದಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಯಿತು ಅದರಂತೆ ಮೇಲ್ಕಂಡ ಅಂಶಗಳಿಗೆ ಈ ಕೆಳಕಾಣಿಸಿದಂತೆ ಉತ್ತರಿಸಲಾಗಿದೆ :-

ಅಂಶ ನಂ.1	:	ನಕಾರಾತ್ಮಕವಾಗಿ
ಅಂಶ ನಂ.2	:	ನಕಾರಾತ್ಮಕವಾಗಿ
ಅಂಶ ನಂ.3	:	ನಕಾರಾತ್ಮಕವಾಗಿ
ಅಂಶ ನಂ.4	:	ಅಂತಿಮ ಆದೇಶದಂತೆ, ಈ ಕೆಳಕಂಡ

:: **ಕಾ ರ ಣ ಗ ಳು** ::

8. **ಅಂಶ ಸಂಖ್ಯೆಃ 1 ಮತ್ತು 2**:- ಈ ಎರಡು ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ದಾವಾದಾಂಶಗಳ ಹಾಗೂ ಸಾಕ್ಷ್ಯಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಒಂದೇ ಬಾರಿ ಉತ್ತರಿಸಲಾಗಿದೆ.

ಮೊದಲ ನೋಟಕ್ಕೆ ಸಮ್ಮತವಾದ ಮೊಕ್ಕದ್ದಮೆ ಮತ್ತು ಅನುಕೂಲತೆಯ ಒಲವುಃ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವ ಪ್ರಮುಖ ಉದ್ದೇಶವು ಪಕ್ಷಗಾರರಿಗೆ ನೀಡುವಂತಹ ಕಾನೂನು ಬದ್ಧ ಹಕ್ಕುಗಳು ಮತ್ತು ಸದರಿ ಹಕ್ಕುಗಳಿಗೆ ಸಂಬಂಧಿಸಿದ ವ್ಯಾಜ್ಯಗಳು ಸಂಪೂರ್ಣವಾಗಿ ತೀರ್ಮಾನವಾಗುವವರೆಗೆ ಸ್ವತ್ತನ್ನು ಯಥಾಸ್ಥಿತಿಯಲ್ಲಿ ಕಾಪಾಡುವುದು. ತಾತ್ಕಾಲಿಕ ನಿರ್ಬಂಧಕಾಜ್ಞೆಯ ಅರ್ಜಿಯನ್ನು ತೀರ್ಮಾನಿಸುವಾಗ ನ್ಯಾಯಾಲಯವು ಸದರಿ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ನೀಡುವುದರಿಂದ ಯಾವ ರೀತಿ ಪರಿಣಾಮಗಳು ಪಕ್ಷಗಾರರ ಹಿತಾಸಕ್ತಿಯ ಮೇಲೆ ಪರಿಣಾಮವನ್ನುಂಟುಮಾಡುತ್ತವೆ ಎಂಬುದನ್ನು ಪರಿಗಣಿಸುವುದು ಅವಶ್ಯಕವಾಗಿರುತ್ತದೆ. ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವು ನ್ಯಾಯಸಮ್ಮತವಾದ ಪರಿಹಾರವಾಗಿದ್ದು, ಸದರಿ ಪರಿಹಾರವನ್ನು

ನೀಡುವುದು ನ್ಯಾಯಾಲಯದ ವಿವೇಚನಾತ್ಮಕವಾದ ಅಧಿಕಾರವಾಗಿರುತ್ತದೆ. ಆದರೆ ಸದರಿ ವಿವೇಚನಾತ್ಮಕ ಅಧಿಕಾರವನ್ನು ನ್ಯಾಯಾಲಯವು ನಿರಂಕುಶ ರೀತಿಯಲ್ಲಿ ಚಲಾಯಿಸುವಂತದ್ದಾಗಿರುವುದಿಲ್ಲ. ಅಂದರೆ ನ್ಯಾಯಾಲಯವು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕಾದರೆ, ವಾದಿಯು ನ್ಯಾಯಾಲಯಕ್ಕೆ ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ತೋರ್ಪಡಿಸುವರೇ ಹಾಗೂ ನ್ಯಾಯಾಲಯಕ್ಕೆ ವಾದಿಯು ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ತಂದಿರುತ್ತಾರೆಯೇ ಎನ್ನುವ ಅಂಶವನ್ನು ಪರಿಗಣಿಸಲು ಮುಂದಾಗಿರುತ್ತದೆ.

9. ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆ ಎಂದರೆ ನ್ಯಾಯಾಲಯಕ್ಕೆ ವಾದಿಯು ತಂದಿರುವ ವ್ಯಾಜ್ಯದಲ್ಲಿ ತಿರುಳು ಇದ್ದು, ಸದರಿ ವ್ಯಾಜ್ಯವನ್ನು ಸದುದ್ದೇಶದಿಂದ ಮಾಡಿದ್ದು, ವಾದಿಯ ವ್ಯಾಜ್ಯವು ವಿಚಾರಣೆಗೆ ಯೋಗ್ಯವಾಗಿದೆ ಎಂದು, ನ್ಯಾಯಾಲಯಕ್ಕೆ ಮನವರಿಕೆಯಾಗಬೇಕಾಗುತ್ತದೆ. ಮುಂದುವರೆದು ವಾದಿಯು ಈ ನ್ಯಾಯಾಲಯದಿಂದ ಅಂತಿಮ ಪರಿಹಾರವನ್ನು ಪಡೆದುಕೊಳ್ಳುವ ಸಂಭವವಿರುತ್ತದೆ ಎನ್ನುವ ವಿಚಾರವು ಸಹ ಮೊದಲ ನೋಟಕ್ಕೆ ಕಾಣಿಸಬೇಕಾಗಿರುವುದು ಅವಶ್ಯಕವಾಗಿರುತ್ತದೆ. ಅಂದರೆ ವಾದಿಯು ಮೊದಲ ನೋಟಕ್ಕೆ ಹಕ್ಕು ತನ್ನ ಪರವಾಗಿದ್ದು, ಸದರಿ ಮೊದಲ

ನೋಟದ ಹಕ್ಕನ್ನು ಪ್ರತಿವಾದಿಯು ವ್ಯತಿಕ್ರಮಣ ಮಾಡಿದ್ದಾರೆಂದು ನ್ಯಾಯಾಲಯದ ಗಮನಕ್ಕೆ ಬಂದರೆ ನ್ಯಾಯಾಲಯವು ವಾದಿಯ ಪರವಾಗಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬಹುದಾಗಿರುತ್ತದೆ. ಈ ಹಂತದಲ್ಲಿ ವಾದಿಯು ತನ್ನ ಪರವಾಗಿ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆ ಇದೆ ಎಂಬುದನ್ನು ಈ ಹಂತದಲ್ಲಿ ತೋರ್ಪಡಿಸುವ ಹೊಣೆಗಾರಿಕೆ ವಾದಿಯ ಮೇಲಿರುತ್ತದೆ. ಈ ನ್ಯಾಯಾಲಯವು ಸ್ಪಷ್ಟಪಡಿಸುವುದೇನೆಂದರೆ, ಈ ಹಂತದಲ್ಲಿ ನ್ಯಾಯಾಲಯವು ಕೇವಲ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ಮಾತ್ರ ಪರಿಶೀಲಿಸುತ್ತಿದ್ದು, ಪಕ್ಷಗಾರರ ಮೊದಲ ನೋಟದ ಸಾಮ್ಯವನ್ನಲ್ಲ.

10. ಈ ಹಂತದಲ್ಲಿ ನ್ಯಾಯಾಲಯವು ಧೀರ್ಘವಾದ ವಿಚಾರಣೆ ಮಾಡುವುದು ನಿಶಿದ್ಧವಾಗಿದ್ದು, ಪಕ್ಷಗಾರರ ದಾವಾ ಆಸ್ತಿ ಮತ್ತು ಪ್ರತಿವಾದಿ ಆಸ್ತಿಯ ಮೇಲಿನ ಸ್ವಾಮ್ಯದ ಮೇಲೆ ಚರ್ಚಿಸುವಂತಿಲ್ಲ. ಈ ಮೂಲ ತತ್ವದಡಿ ಈ ಮೊಕದ್ದಮೆಯ ಸನ್ನಿವೇಶವನ್ನು ನೋಡುವುದಾದರೆ,ವಾದಿಯು ದಾವಾ ಷಡ್ಯೂಲ್ ಸ್ವತ್ತಿನ ಸಂಪೂರ್ಣ ಮಾಲೀಕರಾಗಿ ಸ್ವಾಧೀನದಲ್ಲಿರುತ್ತಾರೆ. ಸದರಿ ದಾವಾ ಷಡ್ಯೂಲ್ ಸ್ವತ್ತಾದ ಗುಬ್ಬಿ ತಾಲ್ಲೂಕು, ಕಡಬ ಹೋಬಳಿ, ಕುನ್ನಾಳು ಗ್ರಾಮದಲ್ಲಿರುವ ಸರ್ವೆ ಸಂಖ್ಯೆ

177/1 ರಲ್ಲಿ ಒಟ್ಟು 3-00 ಎಕರೆ ವಿಸ್ತೀರ್ಣದ ಪೈಕಿ 0-38.08 ಎಕರೆ ಗುಂಟೆ ಜಮೀನು ವಾದಿಗೆ ಸೇರಿರುತ್ತದೆ. ಸದರಿ ದಾವಾ ಷಡ್ಯೂಲ್ ಸ್ವತ್ತು ವಾದಿಯ ಕುಟುಂಬದ ಸ್ವತ್ತಾಗಿದ್ದು, ಅದನ್ನು ವಾದಿಯ ಗಂಡ ಸಾಬುಲಾಲ್ ಸಾಬ್ ಅವರು ವಿಭಾಗದ ಮೂಲಕ ಪಡೆದುಕೊಂಡಿದ್ದು, ಅವರ ಹೆಸರಿನಲ್ಲಿ ಪಹಣಿ ಮತ್ತು ಎಂ.ಆರ್ ಸಹ ದಾಖಲಾಗಿರುತ್ತದೆ. ವಾದಿಯ ಗಂಡನ ಮರಣದ ನಂತರ ದಿನಾಂಕ:20.03.2022 ರ ಪಹಣಿಯಲ್ಲಿ ತಿದ್ದುಪಡಿಯಾಗಿ ವಾದಿಯ ಹೆಸರಿಗೆ ಪಹಣಿ ಮತ್ತು ಎಂ.ಆರ್ ಸಂ.16/2005-2026 ದಿನಾಂಕ 30.10.2025 ರ ಪ್ರಕಾರ ಖಾತಾ ಸಂಖ್ಯೆ:381 ರಂತೆ ವಾದಿಯ ಹೆಸರಿಗೆ ದಾಖಲಾಗಿರುತ್ತದೆ. ಅಂದಿನಿಂದ ವಾದಿಯು ಸದರಿ ಸ್ವತ್ತಿನ ಶಾಂತಿಯುತ ಸ್ವಾಧೀನದಲ್ಲಿದ್ದು, ಸಂಪೂರ್ಣ ಮಾಲೀಕಳಾಗಿ ಅನುಭವಿಸುತ್ತಿರುತ್ತಾರೆ. 3-00 ಎಕರೆಯಲ್ಲಿ ವಾದಿಯ ಕುಟುಂಬದ ಸದಸ್ಯರು ಅವರವರ ಪಾಲಿಗೆ ಅನುಗುಣವಾಗಿ ಜಂಟಿ ಸ್ವಾಧೀನದಲ್ಲಿ ಮುಂದುವರೆಸಿಕೊಂಡು ಬರುತ್ತಿದ್ದು, ಅದರಂತೆ ಪಹಣಿಯಲ್ಲಿ ವಾದಿಯ ಹೆಸರಿಗೆ 0-38-00 ಗುಂಟೆಗಳು ಎಂದು ಸ್ಪಷ್ಟವಾಗಿ ನಮೂದಿಸಿಲಾಗಿದೆ ಹಾಗೂ ವಾದಿಯು 2025-26 ರ ವರೆಗೂ ಹಕ್ಕು ಮತ್ತು ಸ್ವಾಧೀನದಲ್ಲಿ ಇರುತ್ತಾರೆ ಎಂಬುದು ಸ್ಪಷ್ಟಪಡಿಸುತ್ತದೆ.

ಪ್ರತಿವಾದಿಯು ಗುಬ್ಬಿ ತಾಲ್ಲೂಕು, ಕಡಬಾ ಹೋಬಳಿ, ಕುನ್ನಾಳ ಗ್ರಾಮದ ಸರ್ವೆ ನಂ.177/1 ರ ಜಮೀನಿನಲ್ಲಿ ಯಾವುದೇ ರೀತಿಯ ಹಕ್ಕು ಮತ್ತು ಸ್ವಾಧೀನವನ್ನು ಹೊಂದಿರುವುದಿಲ್ಲ. ಆದರೆ ಪ್ರತಿವಾದಿಯ ಜಮೀನು ಗುಬ್ಬಿ ತಾಲ್ಲೂಕು, ಕಡಬಾ ಹೋಬಳಿ, ಕುನ್ನಾಳ ಗ್ರಾಮದ ಸರ್ವೆ ನಂ.174 ರಲ್ಲಿ ಪೂಟ್ ಖರಾಬ್ ಜಮೀನು 0-19.00 ಗುಂಟೆ ಸೇರಿದಂತೆ ಒಟ್ಟು 2.13.00 ಗುಂಟೆಗಳಿದ್ದು, ಇದರಲ್ಲಿ ಉಳಿದಿರುವ 1.34 ಗುಂಟೆಗಳ ಪೈಕಿ 0.04.08 ಗುಂಟೆ ಜಮೀನು ದಿನಾಂಕ:07-11-2001 ಎಂ.ಆರ್.ನಂ.11/1995-96 ಅಡಿಯಲ್ಲಿ ತಾಲ್ಲೂಕು ಪಂಚಾಯತ್ ನ ಕಾರ್ಯನಿರ್ವಾಹಕ ಅಧಿಕಾರಿಯವರ ಹೆಸರಿನಲ್ಲಿರುತ್ತದೆ. ಸದರಿ ಸರ್ವೆ ನಂಬರ್ ನಲ್ಲಿ ಹಕ್ಕು ಪಡೆಯುವ ಬದಲು ಕುನ್ನಾಳ ಗ್ರಾಮ ಪಂಚಾಯ್ತಿಯ ಪಿ.ಡಿ.ಓ ರವರು ದಾವಾ ಸ್ವತ್ತಾದ ಸರ್ವೆ ನಂ.177/1 ರಲ್ಲಿವ ವಾದಿಯ ಸ್ವಾಧೀನಿನಲ್ಲಿ ಕಾನೂನುಬಾಹಿರವಾಗಿ ಹಸ್ತಕ್ಷೇಪ ಮಾಡುತ್ತಿರುತ್ತಾರೆ ಮತ್ತು ಇತ್ತೀಚೆಗೆ ಕಟ್ಟಡವನ್ನು ನಿರ್ಮಿಸುವ ಉದ್ದೇಶದಿಂದ ಗುಂಡಿಗಳನ್ನು ತೋಡಲು ಮುಂದಾಗುತ್ತಿದ್ದಾರೆ. ನಂತರ ವಾದಿಯು ಈ ಕಾನೂನುಬಾಹಿರ ಹಸ್ತಕ್ಷೇಪವನ್ನು ತಡೆಯಲು ಮತ್ತು ಕಾನೂನು ಬಾಹಿರ ಕಟ್ಟಡ ನಿರ್ಮಾಣವನ್ನ ನಿಲ್ಲಿಸಲು ದಿನಾಂಕ:05-05-2026 ರಂದು ಗುಬ್ಬಿಯ

ಇಒ.ಟಿ.ಪಿ, ಅವರಿಗೆ ಅರ್ಜಿಯನ್ನು ಸಲ್ಲಿಸಿದೆ ಹಾಗೂ ಕಾನೂನು ಬಾಹಿರವಾಗಿ ಮಣ್ಣು ಅಗೆಯುತ್ತಿರುವ ಫೋಟೋ ಕಾಪಿಯನ್ನು ದಾವೆಯೊಂದಿಗೆ ಹಾಜರುಪಡಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಪ್ರತಿವಾದಿಯು ಹಸ್ತಕ್ಷೇಪ ಮಾಡುತ್ತಿರುವ ಶೆಡ್ಯೂಲ್ ಆಸ್ತಿ ಸರ್ವೆ ನಂ.177/1 ರ ಸ್ವತ್ತು ವಾದಿಗೆ ಸೇರಿದ್ದಾಗಿದೆ ಮತ್ತು ಸರ್ವೆ ನಂ.174 ಕುನ್ನಾಳ ಗ್ರಾಮಕದ ಜಮೀನಿಗೆ ಯಾವುದೇ ಸರ್ವೆ ನಂ. ಅಥವಾ ಗಡಿಗಳನ್ನು ನಿಗದಿಪಡಿಸದೆ ತನಗೆ ಸೇರಿದ್ದಾಗಿದೆ ಎಂದು ಪ್ರತಿವಾದಿ ಹೇಳಿಕೊಳ್ಳುತ್ತಿದ್ದಾರೆ. ಕುನ್ನಾಳ ಗ್ರಾಮದ ಸರ್ವೆ ನಂಬರ್ 174 ಕ್ಕೂ ದಾವಾ ಸ್ವತ್ತಿಗೂ ಯಾವುದೇ ಸಂಬಂದವಿರುವುದಿಲ್ಲ. ಪ್ರತಿವಾದಿಯು ದಾವ ಸ್ವತ್ತಿನಲ್ಲಿ ಅಂದರೆ, ವಾದಿಯು ತನ್ನ ಜಮೀನಿಗೆ ಹೋಗಲು ರಸ್ತೆಯಾಗಿ ಬಳಸುತ್ತಿರುವ ಜಮೀನಿನ ಪ್ರವೇಶದ್ವಾರಕ್ಕೆ ಪ್ರತಿವಾದಿಯು ಕಾನೂನುಬಾಹಿರವಾಗಿ ಅಡ್ಡಿಪಡಿಸುತ್ತಿದ್ದಾರೆ ಮತ್ತು ಹಸ್ತಕ್ಷೇಪ ಮಾಡುತ್ತಿದ್ದಾರೆ. ಒಂದು ವೇಳೆ ಪ್ರತಿವಾದಿಯು ಕಾನೂನುಬಾಹಿರವಾಗಿ ಅಲ್ಲಿ ಕಟ್ಟಡವನ್ನು ನಿರ್ಮಿಸಿದರೆ, ವಾದಿಯು ಖಂಡಿತವಾಗಿಯೂ ಅಪಾರ ನಷ್ಟವನ್ನು ಅನುಭವಿಸಬೇಕಾಗುತ್ತದೆ ಮತ್ತು ತನ್ನ ಜಮೀನಿಗೆ ಪ್ರವೇಶಿಸಲು ಸಾಧ್ಯವಾಗುವುದಿಲ್ಲ. ಆದ್ದರಿದ ನ್ಯಾಯಾಲಯವು ಈ ದಾವೆಯು ಅಂತಿಮವಾಗಿ ಇತ್ಯರ್ಥದವರೆಗೆ ದಾವೆ

ಅನುಸೂಚಿ ಆಸ್ತಿಯಲ್ಲಿ ವಾದಿಯ ಶಾಂತಿಯುತ ಸ್ವಾಧೀನ ಮತ್ತು ಅನುಭವಕ್ಕೆ ಪ್ರತಿವಾದಿಯು ಅಡ್ಡಿಪಡಿಸದಂತೆ ಮಧ್ಯಂತರ ತಡೆಯಾಜ್ಞೆ ಆದೇಶವನ್ನು ನೀಡುವುದು ನ್ಯಾಯಯುತ ಮತ್ತು ಅತ್ಯಗತ್ಯವಾಗಿದೆ. ಇದರಿಂದ ಪ್ರತಿವಾದಿಗೆ ಯಾವುದೇ ಹಾನಿಯಾಗುವುದಿಲ್ಲ, ಆದರೆ ಮಧ್ಯಂತರ ತಡೆಯಾಜ್ಞೆ ನೀಡದಿದ್ದರೆ ವಾದಿಗೆ ಸರಿಪಡಿಸಲಾಗದ ನಷ್ಟವನ್ನು ಅನುಭವಿಸಬೇಕಾಗುತ್ತದೆ ಮತ್ತು ಪ್ರತಿವಾದಿಯು ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡಿದರೆ, ವಾದಿಯ ಜಮೀನಿನ ಪ್ರವೇಶ ರಸ್ತೆಯೂ ಸಹ ಸಂಪೂರ್ಣವಾಗಿ ಮುಚ್ಚುತ್ತದೆ. ತದನಂತರ ವಾದಿಯು ತನ್ನ ಜಮೀನಿಗೆ ಪ್ರವೇಶಿಸಲು ಸಾದ್ಯವಾಗುವುದಿಲ್ಲ. ಆದ್ದರಿಂದ ನ್ಯಾಯಾಲಯವು ಪ್ರತಿವಾದಿಯ ವಿರುದ್ದ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

11. ವಾದಿಯು ತನ್ನ ಮಧ್ಯಂತರ ಅರ್ಜಿಗೆ ಲಗತ್ತಾಗಿ ಸಲ್ಲಿಸಿರುವ ದಾಖಲಾತಿಗಳೆಂದರೆ, ಪಹಣಿ ಪತ್ರಿಕೆಗಳು, ಗ್ರಾಮ ನಕಾಶೆ, ಕಾರ್ಯ ನಿರ್ವಹಣಾ ಅಧಿಕಾರಿಗಳು ತಾಲ್ಲೂಕು ಪಂಚಾಯತಿ ಗುಬ್ಬಿ ರವರಿಗೆ ನೀಡಿರುವ ಅರ್ಜಿಯ ಹಿಂಬರಹವನ್ನು ಮತ್ತು ಒಂದು ಛಾಯಾಚಿತ್ರವನ್ನು ಹಾಜರುಪಡಿಸಿರುತ್ತಾರೆ.

12. ವಾದಿಯ ವಾದ ಪತ್ರದಲ್ಲಿ ಹಾಗೂ ಮಧ್ಯಂತರ ಅರ್ಜಿಯಲ್ಲಿ ತಿಳಿಸಿರುವ ಅಂಶಗಳನ್ನೆಲ್ಲಾ ಪ್ರತಿವಾದಿಯು ಅಲ್ಲಗಳೆದು, ದಾವೆಯ ಅನುಸೂಚಿ ಆಸ್ತಿಯು ಪ್ರತಿವಾದಿಯ ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯ ಹತ್ತಿರ ಬರುವುದಿಲ್ಲ ಮತ್ತು ವಾದಿಯ ಆಸ್ತಿಯು ಪ್ರತಿವಾದಿಯ ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಗೆ ಹೊಂದಿಕೊಂಡಿರುವುದಿಲ್ಲ. ಗುಬ್ಬಿ ತಾಲ್ಲೂಕು, ಕಡಬಾ ಹೋಬಳಿ, ಕುನ್ನಾಳ ಗ್ರಾಮದ ಸ.ನಂ. 177/1ರಲ್ಲಿ ಒಟ್ಟು 3 ಎಕರೆ ವಿಸ್ತೀರ್ಣದ ಜಮೀನು ಇದ್ದು, ಸದರಿ ಪಹಣಿಯಲ್ಲಿ ಬೇರೆ ಬೇರೆ ಜನರ ಹೆಸರಿನಲ್ಲಿ ಬೇರೆ ಬೇರೆ ಅಳತೆಗಳಲ್ಲಿ ಇರುತ್ತವೆ. ಆದ್ದರಿಂದ ಈ ದಾವೆಯಲ್ಲಿ ಆ ಎಲ್ಲಾ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ, ಆದ್ದರಿಂದ ಈ ದಾವೆಯು ಊರ್ಜಿತವಾಗಿರುವುದಿಲ್ಲ. ಗುಬ್ಬಿ ತಾಲ್ಲೂಕು, ಕಡಬಾ ಹೋಬಳಿ, ಕುನ್ನಾಳ ಗ್ರಾಮದಲ್ಲಿರುವ ಸ.ನಂ. 174 ರಲ್ಲಿ ಖರಾಬು ಸೇರಿ ಒಟ್ಟು 2 ಎಕರೆ 13 ಗುಂಟೆ ಜಮೀನು ಇದ್ದು, ಸದರಿ ಆಸ್ತಿಯು ಮೂಲತಃ ಸರ್ಕಾರಕ್ಕೆ ಸೇರಿದ್ದು, ಸರ್ಕಾರವು ಸದರಿ ಜಮೀನಿನ ಪೈಕಿ 0.04.08 ಗುಂಟೆಯನ್ನು ಗುಬ್ಬಿಯ ತಾಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿರವರಿಗೆ 1995 ರಲ್ಲಿ ನೀಡಲಾಗಿರುತ್ತದೆ. ಅದರಂತೆ ಎಂ.ಆರ್ ನಂ.11/1995-96 ರಂತೆ ಗುಬ್ಬಿಯ ತಾಲೂಕು ಪಂಚಾಯತ್‌ನ

ಕಾರ್ಯನಿರ್ವಾಹಕ ಅಧಿಕಾರಿಯ ಹೆಸರಿಗೆ ನಮೂದಿಸಲಾಗಿರುತ್ತದೆ ಮತ್ತು ಸದರಿ ಆಸ್ತಿಯ ಎಲ್ಲಾ ಕಂದಾಯ ದಾಖಲೆಗಳನ್ನು ಗುಬ್ಬಿ ತಾಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯ ಹೆಸರಿಗೆ ವರ್ಗಾಯಿಸಲಾಯಿತು. ತದನಂತರ ಕಾರ್ಯನಿರ್ವಾಹಕ ಅಧಿಕಾರಿ ತಾಲೂಕು ಪಂಚಾಯತ್ ಗುಬ್ಬಿರವರು ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯ ಸಂಪೂರ್ಣ ಮಾಲೀಕರಾಗಿ ಶಾಂತಿಯುತ ಸ್ವಾಧೀನ ಹಾಗೂ ಅನುಭವವನ್ನು ಹೊಂದಿರುತ್ತಾರೆ. ಸದರಿ ಆಸ್ತಿಯಲ್ಲಿ ಒಂದು ಅಂಗನವಾಡಿ ಕಟ್ಟಡವಿದ್ದು, ಸದರಿ ಅಂಗನವಾಡಿ ಕಟ್ಟಡದಲ್ಲಿ ಅನೇಕ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಸದರಿ ಅಂಗನವಾಡಿ ಕಟ್ಟಡವು ಹಳೆಯ ಕಟ್ಟಡವಾಗಿದ್ದು, ಅದು ಬಿದ್ದುಹೋಗುವ ಸ್ಥಿತಿಯಲ್ಲಿರುತ್ತದೆ. ಈ ಕಾರಣಕ್ಕಾಗಿ ಹೊಸ ಅಂಗನವಾಡಿ ಕಟ್ಟಡವನ್ನು ಸರ್ಕಾರದಿಂದ ಅನುಮೋದಿಸಲಾಗಿದೆ. ಈ ನಿಟ್ಟಿನಲ್ಲಿ ದಿನಾಂಕ:20.12.2025 ರಂದು ಕುನ್ನಾಲ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಹೊಸ ಅಂಗನವಾಡಿ ಕಟ್ಟಡದ ನಿರ್ಮಾಣಕ್ಕಾಗಿ KREIS ಯೋಜನೆಗೆ ಅನುಮೋದನೆ ನೀಡಲಾಗಿದ್ದು, ಅದರಂತೆ ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯಲ್ಲಿ ಹೊಸ ಅಂಗನವಾಡಿ ಕಟ್ಟಡದ ನಿರ್ಮಾಣಕ್ಕಾಗಿ ಸರ್ಕಾರದಿಂದ ಶ್ರೀ ರಘುನಾಥ ರಾಮಾ ರೆಡ್ಡಿ ಎಂಬುವವರಿಗೆ ಹೊಸ

ಅಂಗನವಾಡಿ ಕಟ್ಟಡ ನಿರ್ಮಾಣದ ಗುತ್ತಿಗೆದಾರರಾಗಿ ಯೋಜನೆ ಮಾಡಿ, ಕಾಮಗಾರಿ ಆದೇಶವನ್ನು ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟು ಹೊರಡಿಸಲಾಗಿರುತ್ತದೆ. ಸದರಿ ಷರತ್ತಿನಂತೆ ಗುತ್ತಿಗೆದಾರರಾದ ಶ್ರೀ ರಘುನಾಥ ರಾಮಾ ರೆಡ್ಡಿ ರವರು ಹೊಸ ಅಂಗನವಾಡಿ ಕಟ್ಟಡವನ್ನು ಕಾಮಗಾರಿ ಆದೇಶ ನೀಡಿದ ದಿನಾಂಕದಿಂದ 12 ತಿಂಗಳೊಳಗೆ ನಿರ್ಮಿಸಬೇಕಾಗಿರುತ್ತದೆ. ಆದರೆ ವಾದಿಯು ಅಂಗನವಾಡಿ ಕಟ್ಟಡದ ನಿರ್ಮಾಣ ಕಾರ್ಯಕ್ಕೆ ಅಡ್ಡಿಪಡಿಸುತ್ತಿದ್ದಾರೆ.

13. ಪ್ರತಿವಾದಿಯು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದು, ಸದರಿ ಅಂಗನವಾಡಿ ಕಟ್ಟಡವು ಪ್ರತಿವಾದಿಯ ನಿಯಂತ್ರಣಕ್ಕೆ ಬರುವುದಿಲ್ಲ. ಪ್ರತಿವಾದಿಯು ವಾದಿಯ ಶಾಂತಿಯುತ ಸ್ವಾಧೀನಕ್ಕೆ ಹಸ್ತಕ್ಷೇಪ ಮಾಡುತ್ತಿಲ್ಲ. ಏಕೆಂದರೆ ವಾದಿಯ ಆಸ್ತಿಯ ನಂತರ ಶಾಲಾ ಕಟ್ಟಡವನ್ನು ಹೊಂದಿರುತ್ತದೆ, ಹೀಗಿರುವಾಗ ಪ್ರತಿವಾದಿಯು ವಾದಿಯ ಶಾಂತಿಯುತ ಸ್ವಾಧೀನಕ್ಕೆ ಹೇಗೆ ಹಸ್ತಕ್ಷೇಪ ಮಾಡಲು ಸಾಧ್ಯ ಎಂಬುದಾಗಿರುತ್ತದೆ. ದಾವಾ ಆಸ್ತಿ ಮತ್ತು ಪ್ರತಿವಾದ ಪತ್ರದ ಆಸ್ತಿಗಳು ಒಂದಕ್ಕೊಂದು ವಿಭಿನ್ನ ಆಸ್ತಿಗಳಾಗಿದ್ದು, ವಾದಿಯು ದಾವಾ ಶೆಡ್ಯೂಲ್ ಆಸ್ತಿಯ ಚೆಕ್ಕುಬಂದಿಯನ್ನು ತಪ್ಪಾಗಿ ನೀಡಿರುತ್ತಾರೆ. ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯ ಚೆಕ್ಕುಬಂದಿ,

ಪೂರ್ವಕ್ಕೆ:ಗ್ರಾಮ ಠಾಣಾ,ಪಶ್ಚಿಮಕ್ಕೆ:ಸರ್ಕಾರಿ ರಸ್ತೆ, ಉತ್ತರಕ್ಕೆ:ಹಳೆಯ ಅಂಗನವಾಡಿ ಕಟ್ಟಡ, ದಕ್ಷಿಣಕ್ಕೆ: ಸರ್ಕಾರಿ ಶಾಲೆ, ತದನಂತರ ವಾದಿಯ ಆಸ್ತಿ ಬರುತ್ತದೆ.

14. ವಾದಿಯು ಗುಬ್ಬಿಯ ಇ.ಓ ರವರಿಂದ ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಪ್ರತಿವಾದಿಯ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿದ್ದಾರೆ. ವಾದಿಗೆ ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯ ಮೇಲೆ ಯಾವುದೇ ಹಕ್ಕು, ಅಧಿಕಾರ ಮತ್ತು ಸ್ವಾಧೀನವಾಗಲಿ ಇರುವುದಿಲ್ಲ. ಸದರಿ ಹೊಸ ಅಂಗನವಾಡಿ ಕಟ್ಟಡವನ್ನು ಕಾಂಟ್ರಾಕ್ಟರ್ ರಘುನಾಥ ರಾಮ ರೆಡ್ಡಿ ರವರು ಸ.ನಂ.177/1 ರಲ್ಲಿ ನಿರ್ಮಿಸುತ್ತಿಲ್ಲ ಮತ್ತು ವಾದಿಯ ದಾವಾ ಆಸ್ತಿಯ ಶಾಂತಿಯುತ ಸ್ವಾಧೀನಕ್ಕೆ ಯಾವುದೇ ಅಡ್ಡಿಪಡಿಸಿರುವುದಿಲ್ಲ. ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯು ಗುಬ್ಬಿಯ ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯ ಹೆಸರಿನಲ್ಲಿದ್ದು, ಸದರಿ ಜಾಗದಲ್ಲಿ ಅಂಗನವಾಡಿ ಕಟ್ಟಡವನ್ನು ರಘುನಾಥ ರಾಮರೆಡ್ಡಿ ಅವರು ನಿರ್ಮಿಸುತ್ತಿದ್ದು, ಸದರಿಯವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ಆದ್ದರಿಂದ, ಈ ದಾವೆಯು ಕಾನೂನಿನ ಪ್ರಕಾರವಾಗಲಿ ಅಥವಾ ವಾಸ್ತವಿಕ ಸಂಗತಿಗಳ ಆಧಾರದ ಮೇಲಾಗಲಿ

ಮುಂದುವರೆಸಲು ಯೋಗ್ಯವಾಗಿರುವುದಿಲ್ಲ. ಆದ್ದರಿಂದ ವಾದಿಯು ತಂದಿರುವ ಮಧ್ಯಂತರ ಅರ್ಜಿಯನ್ನು ವಜಾ ಗೊಳಿಸಬೇಕೆಂದು ಕೋರಿರುತ್ತಾರೆ.

15. ಪ್ರತಿವಾದಿಯರು ತಮ್ಮ ತಕರಾರಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ದಾಖಲಾತಿಗಳೆಂದರೆ, ಪಹಣಿ ಪತ್ರಿಕೆ, ಎಂ.ಆರ್, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಗಳ ಸಂಘ ಇವರು ಶ್ರೀ ರಘುನಾಥ ರಾಮರೆಡ್ಡಿ ರವರಿಗೆ ಕೆಲಸಕ್ಕೆ ಸಂಬಂಧಿಸಿದಂತೆ ನೀಡಿರುವ ನೋಟೀಸನ್ನು ಹಾಜರುಪಡಿಸಿರುತ್ತಾರೆ. ಕರ್ನಾಟಕ ಸರ್ಕಾರದ ರೆಸಿಡೆನ್ಸಿಯಲ್ ಎಜುಕೇಶನಲ್ ಇನ್ಸಿಟ್ಯೂಟೂಶನಲ್ ಸೊಸೈಟಿ ಬೆಂಗಳೂರು ರವರು ಅಂಗನವಾಡಿ ಕಟ್ಟಡವನ್ನು ನಿರ್ಮಿಸಲು ನೀಡಿರುವ ಡೀಟೈಲ್ಡ್ ಎಸ್ಟಿಮೇಟ್ ನ್ನು ಹಾಜರುಪಡಿಸಿರುತ್ತಾರೆ. ಅಂಗನವಾಡಿ ಕಟ್ಟಡದ ಬ್ಲೂ ಪ್ರಿಂಟ್ ಮತ್ತು ಛಾಯಾಚಿತ್ರಗಳನ್ನು ಹಾಜರುಪಡಿಸಿರುತ್ತಾರೆ.

16. ವಾದಿಯು ತನ್ನ ಅರ್ಜಿಗೆ ಸಂಬಂಧಿಸಿದಂತೆ ತನ್ನ ಪರ ವಾದವನ್ನು ಮಂಡಿಸುತ್ತಾ, ಈ ದಾವೆಯನ್ನು ವಾದಿಯು ಪ್ರತಿವಾದಿಯ ವಿರುದ್ದ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆ

ಆದೇಶವನ್ನು ಕೋರಿ ಸಲ್ಲಿಸಿದ್ದು, ದಾವಾಸ್ತಿಗೆ ಪ್ರವೇಶಿಸಲು ಇರುವ ದಾರಿಯನ್ನು ಪ್ರತಿವಾದಿಯು ಗುಂಡಿ ತೆಗೆದು ಕಟ್ಟಡ ನಿರ್ಮಿಸುತ್ತಿದ್ದು ವಾದಿಯು ತನ್ನ ಜಮೀನಿಗೆ ಹೋಗಲು ತೊಂದರೆಯಾಗುತ್ತಿದೆ. ಆದ್ದರಿಂದ ಪ್ರತಿವಾದಿಯು ದಾರಿಯಲ್ಲಿ ಗುಂಡಿ ತೆಗೆಯದಂತೆ ಹಾಗೂ ವಾದಿಯ ಜಮೀನಿಗೆ ಹೋಗಲು ತೊಂದರೆ ಕೊಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡಬೇಕೆಂದು ವಾದಿಸಿರುತ್ತಾರೆ.

17. ಇದಕ್ಕೆ ಪ್ರತಿಯಾಗಿ ಪ್ರತಿವಾದ ಪರ ವಕೀಲರು ತಮ್ಮ ಪರ ವಾಡದವನ್ನು ಮಂಡಿಸುತ್ತಾ, ಪ್ರತಿವಾದಿಯು ವಾದಿಯು ತಿಳಿಸಿರುವ ಅಂಶಗಳನ್ನು ಅಲ್ಲಗಳೆದು ವಾದಿಯ ದಾವಾಸ್ತಿಗೆ ಪ್ರತಿವಾದಿ ತೊಂದರೆ ನೀಡಿರುವುದಿಲ್ಲ ಮತ್ತು ದಾವಾಸ್ತಿಗೆ ಹೋಗುವ ದಾರಿಯಲ್ಲಿ ಎಂದಿಗೂ ಪ್ರತಿವಾದಿ ಕಟ್ಟಡವನ್ನು ನಿರ್ಮಿಸುತ್ತಿಲ್ಲ. ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯೇ ಬೇರೆ ದಾವಾಸ್ತಿಯ ಶೆಡ್ಯೂಲ್ ಆಸ್ತಿಯೇ ಬೇರೆ, ವಾದಿಯು ದಾವಾ ಸ್ವತ್ತಿನ ಚೆಕ್ಕುಬಂದಿಯನ್ನು ತಪ್ಪಾಗಿ ನಮೂದಿಸಿರುತ್ತಾರೆ. ದಾವಾ ಆಸ್ತಿಯ ಪಕ್ಕ ಪ್ರತಿವಾದಿ ಪ್ರತಿವಾದದ ಶೆಡ್ಯೂಲ್ ಸ್ವತ್ತು ಬರುವುದಿಲ್ಲ. ವಾದಿಯೇ ಹಾಜರುಪಡಿಸಿರುವ ಪಹಣಿಪಿಯಲ್ಲಿ ಸ.ನಂ.177/1 ರಲ್ಲಿ ಹಲವಾರು ಜನರು ಜಮೀನನ್ನು ಹೊಂದಿರುವುದು ನಮೂದು ಇರುತ್ತದೆ.

ಅದರಂತೆ ವಾದಿಯ ಜಮೀನಿನ ಪಕ್ಕ ಶಿಕ್ಷಣಾಧಿಕಾರಿಗಳು ಗುಬ್ಬಿ ರವರ ಹೆಸರಿನಲ್ಲಿರುವ 0.03.08 ಗುಂಟೆ ಜಮೀನು ಇದ್ದು ಸದರಿ ಜಮೀನಿನಲ್ಲಿ ಒಂದು ಶಾಲಾ ಕಟ್ಟಡವಿದ್ದು ಅದರ ಪಕ್ಕ ಪ್ರತಿವಾದಿಯ ಹೆಸರಿನಲ್ಲಿರುವ ಸ್ವತ್ತು ಪ್ರಾರಂಭವಾಗುತ್ತದೆ, ಆ ಶಾಲೆಯ ಪಕ್ಕ ಸ್ವಲ್ಪ ಜಾಗವಿದ್ದು ಅದರ ನಂತರ ಹಳೇ ಅಂಗನವಾಡಿ ಕಟ್ಟಡ ಬರುತ್ತದೆ. ಸದರಿ ಖಾಲಿ ಜಾಗದಲ್ಲೆ ಹೊಸದಾಗಿ ಅಂಗನವಾಡಿಯ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ. ಆ ಜಾಗಕ್ಕೂ ವಾದಿಗೂ ಯಾವುದೇ ಸಂಬಂಧವಿರುವುದಿಲ್ಲ. ವಾದಿಯ ವಾದ ಪತ್ರದ ಚೆಕ್ಕುಬಂದಿಯಲ್ಲೂ ಸಹ ಪ್ರತಿವಾದಿಯ ಹೆಸರಿನಲ್ಲಿರುವ ಸ್ವತ್ತು ಬರುವುದಿಲ್ಲ. ಪ್ರತಿವಾದಿಯು ರಸ್ತೆಯಲ್ಲಿ ಅಂಗನವಾಡಿಯನ್ನು ನಿರ್ಮಿಸುತ್ತಿರುವುದಿಲ್ಲ. ವಾದಿಯು ಉದ್ದೇಶಪೂರ್ವಕವಾಗಿ ಈ ಸುಳ್ಳು ಅಂಶಗಳಿಂದ ಕೂಡಿದ ದಾವೆಯನ್ನು ತಂದಿರುತ್ತಾರೆ. ಮಕ್ಕಳ ವಿದ್ಯಾಭ್ಯಾಸದ ದೃಷ್ಟಿಯಿಂದ ಇರುವ ಅಂಗನವಾಡಿ ಕಟ್ಟಡ ಹಳೆಯದಾಗಿರುವುದರಿಂದ ಹೊಸ ಅಂಗನವಾಡಿಯನ್ನು ನಿರ್ಮಿಸಲು ಸರ್ಕಾರದಿಂದ ಅನುಮೋದನೆ ದೊರೆತಿದ್ದು ಸದರಿ ಅಂಗನವಾಡಿಯನ್ನು ನಿರ್ಮಿಸಲು ಶ್ರೀ ರಘುನಾಥ ರಾಮರೆಡ್ಡಿ ಎಂಬುವವರಿಗೆ ಗುತ್ತಿಗೆಯನ್ನು ನೀಡಿ 12 ತಿಂಗಳೊಳಗಾಗಿ ಅಂಗನವಾಡಿ ಕಟ್ಟಡವನ್ನು ಪೂರ್ಣಗೊಳಿಸಬೇಕೆಂದು ನಿರ್ದೇಶನ

ನೀಡಿರುತ್ತಾರೆ. ಈಗಾಗಲೇ ಸುಮಾರು 6 ತಿಂಗಳು ಕಳೆದಿರುತ್ತದೆ. ಆದ್ದರಿಂದ ವಾದಿಯು ತಂದಿರುವ ಈ ಸುಳ್ಳು ಅರ್ಜಿಯನ್ನು ತಿರಸ್ಕರಿಸಬೇಕೆಂದು ವಾದಿಸಿರುತ್ತಾರೆ.

18. ವಾದಿ ಮತ್ತು ಪ್ರತಿವಾದಿ ರವರು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ನ್ಯಾಯಾಲಯಕ್ಕೆ ಕಂಡು ಬರುವುದೇನೆಂದರೆ ವಾದಿಯ ದಾವಾ ಸ್ವತ್ತಿನ ಶೆಡ್ಯೂಲ್ ನ ಅಕ್ಕ ಪಕ್ಕ ಪ್ರತಿವಾದಿಗೆ ಸೇರಿದ ಜಮೀನು ಇಲ್ಲದಿರುವುದು ಕಂಡು ಬಂದಿರುತ್ತದೆ. ವಾದಿಯು ತನ್ನ ಅರ್ಜಿಯಲ್ಲಿ ತಿಳಿಸಿದಂತೆ ವಾದಿಯು ಹಾಜರುಪಡಿಸಿರುವ ಛಾಯಾಚಿತ್ರವನ್ನು ಪರಿಶೀಲಿಸಿದಾಗ ಸದರಿ ಛಾಯಾಚಿತ್ರದಲ್ಲಿ ಗುಂಡಿ ತೆಗೆದಿರುವ ಜಾಗದಲ್ಲಿ ಯಾವುದೇ ರಸ್ತೆ ಇಲ್ಲದಿರುವುದು ಕಂಡು ಬಂದಿರುತ್ತದೆ. ಸದರಿ ಛಾಯಾ ಚಿತ್ರ್ರದಲ್ಲಿ ಗುಂಡಿ ತೆಗೆದಿರುವ ಜಾಗದ ಅಕ್ಕ ಪಕ್ಕ ಶಾಲೆ ಮತ್ತು ಅಂಗನವಾಡಿ ಇದ್ದು, ಗುಂಡಿ ತೆಗೆದಿರುವ ಹಿಂದಿನ ಜಾಗ ಬೇಲಿಯನ್ನು ಹಾಕಿದ್ದು ಗುಂಡಿ ತೆಗೆದಿರುವ ಮುಂಭಾಗ ರಸ್ತೆ ಇದ್ದು ಸದರಿ ರಸ್ತೆಯಲ್ಲಿ ಜೆಲ್ಲಿ ಮತ್ತು ಮರಳು ಸುರಿದಿರುವುದು ಕಂಡು ಬಂದಿರುತ್ತದೆ. ಆದರೆ ವಾದಿಯು ಸದರಿ ರಸ್ತೆ ಕಾಣಿಸದಂತೆ ಛಾಯಾಚಿತ್ರ ತೆಗೆದು ಹಾಕಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಸ್ಪಷ್ಟವಾಗಿ ಕಾಣುವಂತೆ

ಪ್ರತಿವಾದಿಯು 2 ಛಾಯಾಚಿತ್ರಗಳನ್ನು ಹಾಜರುಪಡಿಸಿರುತ್ತಾರೆ. ವಾದಿಯು ತಿಳಿಸಿರುವ ರಸ್ತೆಗೆ ಪ್ರತಿವಾದಿಯು ಯಾವುದೇ ಕಟ್ಟಡವನ್ನು ನಿರ್ಮಿಸುತ್ತಿಲ್ಲದಿರುವುದು ಕಂಡು ಬಂದಿರುತ್ತದೆ. ವಾದಿಯ ದಾವಾಸ್ತಿಯೇ ಬೇರೆ ಪ್ರತಿವಾದಿಯ ಆಸ್ತಿಯೇ ಬೇರೆ ಬೇರೆಯಾಗಿರುತ್ತದೆ. ಸದರಿ ರಸ್ತೆಯ ಅಕ್ಕ ಪಕ್ಕ ಸರ್ವೆ ನಂಬರ್ 177/1 ರಲ್ಲಿ ಹಲವಾರು ಜನರ ಜಮೀನುಗಳು ಇರುವುದು ವಾದಿಯು ಹಾಜರುಪಡಿಸಿರುವ ಪಹಣಿಯಲ್ಲಿ ಕಂಡು ಬಂದಿರುತ್ತದೆ. ಹೀಗಿರುವಾಗ ಸದರಿ ರಸ್ತೆಗೆ ಪ್ರತಿವಾದಿಯು ತೊಂದರೆ ನೀಡಿದ್ದರೆ ಇತರರು ಪ್ರಶ್ನಿಸುತ್ತಿದ್ದರು. ಆದರೆ ಪ್ರತಿವಾದಿಯು ನಿರ್ಮಿಸುತ್ತಿರುವ ಅಂಗನವಾಡಿ ಕಟ್ಟಡವು ವಾದ ಪತ್ರದ ಶೆಡ್ಯೂಲ್ ಸ್ವತ್ತಿನಲ್ಲಿ ಆಗಲಿ, ವಾದಿಯು ಅರ್ಜಿಯಲ್ಲಿ ತಿಳಿಸಿದಂತೆ ರಸ್ತೆಯಲ್ಲಿ ಆಗಲಿ ಬರುವುದಿಲ್ಲವಾದ್ದರಿಂದ ವಾದಿಯು ಮಧ್ಯಂತರ ಅರ್ಜಿಯಲ್ಲಿ ಕೋರಿದಂತೆ ಪರಿಹಾರವನ್ನು ಪಡೆಯಲು ಅರ್ಹರಿರುವುದಿಲ್ಲ ಎಂಬುದಾಗಿರುತ್ತದೆ.

19. ಈ ನ್ಯಾಯಾಲಯದ ಮುಂದಿರುವ ದಾವೆಯನ್ನು ವಾದಿಯು ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯ ಆದೇಶವನ್ನು ಕೋರಿ ಸಲ್ಲಿಸಿದ್ದು, ಮಧ್ಯಂತರ ಅರ್ಜಿ ಸಂಖ್ಯೆ -3 ನ್ನು ಪ್ರತಿವಾದಿಯ ವಿರುದ್ಧ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು

ಕೋರಿ ಸಲ್ಲಿಸಿದ್ದು, ಈ ಹಂತದಲ್ಲಿ ನ್ಯಾಯಾಲಯವು ಇದಕ್ಕೆ ಸಂಬಂಧಿಸಿದಂತೆ ಮಾತ್ರ ಗಮನಿಸಬೇಕಾಗಿರುವುದು ಸೂಕ್ತವಾಗಿರುತ್ತದೆ. ಆದ್ದರಿಂದ ವಾದಿ ಮತ್ತು ಪ್ರತಿವಾದಿಯು ಸಲ್ಲಿಸಿರುವ ದಾವೆಗೆ ಸಂಬಂಧಿಸಿದಂತೆ ಹಾಜರುಪಡಿಸಿರುವ ದಾಖಲಾತಿಗಳಿಂದ ವಾದಿಯ ದಾವಾ ಆಸ್ತಿಗೆ ಹೋಗದಂತೆ ದಾರಿಯಲ್ಲಿ ಗುಂಡಿ ತೆಗೆದು ಕಟ್ಟಡವನ್ನು ಕಟ್ಟುತ್ತಿರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ ಮತ್ತು ಪ್ರತಿವಾದಿಯು ತನ್ನ ಸ್ವತ್ತಿನಲ್ಲಿ ಅಂಗನವಾಡಿಯನ್ನು ನಿರ್ಮಿಸುತ್ತಿರುವುದರಿಂದ ವಾದಿಯು ತನ್ನ ಮಧ್ಯಂತರ ಅರ್ಜಿಯಲ್ಲಿ ಕೋರಿದಂತೆ ಪರಿಹಾರವನ್ನು ನೀಡುವುದರಿಂದ ವಾದಿಗಿಂತ ಪ್ರತಿವಾದಿಗೆ ಹೆಚ್ಚು ನಷ್ಟ ಮತ್ತು ಅನ್ಯಾಯವಾಗುತ್ತದೆಂದು ಪರಿಗಣಿಸಿ, ಈ ಹಂತದಲ್ಲಿ ನೋಡುವುದಾದರೆ ವಾದಿಯು ಮೇಲ್ನೋಟಕ್ಕೆ ನ್ಯಾಯಸಮ್ಮತ ವಾದ ದಾವೆಯನ್ನು ತಂದಿರುವುದಿಲ್ಲ. ಆದ್ದರಿಂದ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪ್ರತಿವಾದಿಯ ವಿರುದ್ದ ನೀಡಲು ಬರುವುದಿಲ್ಲವಾಗಿರುತ್ತದೆಂದು ಅಭಿಪ್ರಾಯಪಡುತ್ತ ಅನುಕೂಲತೆಯ ಒಲವು ಪ್ರತಿವಾದಿಯ ಪರವಾಗಿರುತ್ತದೆಂದು **ಅಂಶ-1 ಮತ್ತು 2 ನ್ನು ನಕಾರಾತ್ಮಕವಾಗಿ** ಉತ್ತರಿಸಿರುತ್ತದೆ.

20. **ಅಂಶ ಸಂಖ್ಯೆಃ 3: ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿ:**

ನ್ಯಾಯಸಮ್ಮತವಾದ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆಯಲು ವಾದಿಯು ಕೇವಲ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯು ತನ್ನ ಪರವಾಗಿದೆ ಎಂದು ನಿರೂಪಿಸುವುದರ ಜೊತೆಗೆ ಅನುಕೂಲತೆಯ ಒಲವು ತನ್ನ ಪರವಾಗಿದೆ ಎಂದು ಜೊತೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ತನ್ನ ಪರವಾಗಿ ನೀಡದಿದ್ದರೆ ಪ್ರತಿವಾದಿಗಿಂತ ತನಗೆ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿ ಉಂಟಾಗುತ್ತದೆ ಎಂದು ನಿರೂಪಿಸುವುದು ಅವಶ್ಯವಾಗಿರುತ್ತದೆ. ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿ ಎಂದರೆ ವಾದಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡದೆ ಹೋದರೆ ಆತನಿಗೆ ಆಗುವ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿಯನ್ನು ಹಣದ ರೂಪದಲ್ಲಾಗಲೀ ಅಥವಾ ಇನ್ಯಾವುದೇ ರೂಪದಲ್ಲಾಗಲೀ ನೀಡಿ ಸರಿಪಡಿಸಲಾಗದು ಎನ್ನುವ ಸಂದರ್ಭವಿದ್ದರೆ ಅಂತಹ ಸಂದರ್ಭವನ್ನು ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿ ಎಂದು ಹೇಳಬಹುದು. ಈ ನ್ಯಾಯಾಲಯವು 1 ಮತ್ತು 2ನೇ ಅಂಶಗಳನ್ನು ಚರ್ಚಿಸುವ ಕಾಲಕ್ಕೆ ವಾದಿಯು ಮೊದಲ ನೋಟಕ್ಕೆ ನ್ಯಾಯ

ಸಮ್ಮತವಾದ ಮೊಕದ್ದಮೆಯನ್ನು ತೋರ್ಪಡಿಸಿರುವುದಿಲ್ಲ ಮತ್ತು ಅನುಕೂಲತೆಯ ಒಲವು ತನ್ನ ಪರವಾಗಿದೆ ಎಂದು ನಿರೂಪಿಸಿರುವುದಿಲ್ಲವೆಂದು ನ್ಯಾಯಾಲಯವು ಅಭಿಪ್ರಾಯಕ್ಕೆ ಬಂದಿರುತ್ತದೆ. ಪ್ರತಿವಾದಿಯ ವಿರುದ್ದ ಈ ಹಂತದಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ನೀಡುವುದರಿಂದ ವಾದಿಗಿಂತ ಪ್ರತಿವಾದಿಗೆ ಸಾಕಷ್ಟು ನಷ್ಟ ಆಗುವ ಸಾಧ್ಯತೆ ಇರುತ್ತದೆ ಎಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಉಭಯ ಪಕ್ಷಗಾರರ ಸಂಗತಿಗಳನ್ನು ತುಲನಾತ್ಮಕವಾಗಿ ನೋಡಿದಾಗ, ಅಂಶ -1 ಮತ್ತು 2 ರಲ್ಲಿ ತಿಳಿಸಿದ ಕಾರಣದಿಂದಾಗಿ ಈ ದಾವೆಯ ಅನುಕೂಲತೆ ಒಲವು ಪ್ರತಿವಾದಿಯ ಪರವಾಗಿರುತ್ತದೆ ಎಂದು ಸ್ಪಷ್ಟವಾಗುತ್ತದೆ. ಈ ಅರ್ಜಿಯನ್ನು ಪುರಸ್ಕರಿಸಿದರೆ ವಾದಿಗೆ ನಷ್ಟ ಆಗುವುದಕ್ಕಿಂತ ಪ್ರತಿವಾದಿಗೆ ಹೆಚ್ಚಿನ ಪ್ರಮಾಣದಲ್ಲಿ ನಷ್ಟ ಉಂಟಾಗುತ್ತದೆ ಎನ್ನುವ ಅಭಿಪ್ರಾಯಕ್ಕೆ ಬಂದು **ಅಂಶ-3ನ್ನು ನಕಾರಾತ್ಮಕವಾಗಿ ಉತ್ತರಿಸುತ್ತದೆ.**

21. ಅಂಶ 4:- ಈ ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

:: ಆದೇಶ ::

ವಾದಿ/ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿದಂತಹ ಮಧ್ಯಂತರ ಅರ್ಜಿ ಸಂಖ್ಯೆ-3ನ್ನು ರೂ.1000/- ಖರ್ಚಿನೊಂದಿಗೆ ತಿರಸ್ಕರಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ: **13ನೇ ಜುಲೈ 2026** ರಂದು ಉದ್ಘೋಷಿಸಲಾಯಿತು)

SAVITHARANI H V

Digitally signed by SAVITHARANI H V
Date: 2026.07.14 16:58:00 +0530

(ಶ್ರೀಮತಿ ಸವಿತರಾಣಿ ಹೆಚ್.ವಿ.)
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಗುಬ್ಬಿ.